ಅ) ಹೆಚ್. ಡಿ. ಕೋಟೆ ತಾಲ್ಲೂಕಿನಲ್ಲಿ ನಿರ್ಮಿಸಿರುವ ತಾರಕ ಅಣೆಕಟ್ಟೆ ಕೆಲಸವನ್ನು ಎಂದು ಪ್ರಾರಂಭ ಮಾಡಲಾಯಿತು ಹಾಗೂ ಯಾವಾಗ ಪೂರ್ಣಗೊಳಿಸಲಾಯಿತು. ಈ ಅಣೆಕಟ್ಟೆಗೆ ಖರ್ಚು ಮಾಡಲಾಗಿರುವ ಹಣ ಎಷ್ಟು ? ಉದ್ದೇಶಿತ ಆಚ್ಚುಕಟ್ಟಿಗೆ ನೀರು ಒದಗಿಸಲಾಗಿಲ್ಲದೆಂಬುದು ಸರ್ಕಾರ ದವರ ಗಮನಕ್ಕೆ ಬಂದಿದೆಯೆ ?

ಆ) ಕಬಿನಿ ಜಲಾಶಯದ ಹಿಂಬದಿ ನೀರನ್ನು ಎತ ನೀರಾವರಿ ಮೂಲಕ ತಾರಕ ಅಣೆಕಟ್ಟೆಗೆ ಹಾಯಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಇ) ಹಾಗಿದ್ದಲ್ಲಿ, ಅಂದಾಜು ಪೊತ್ತ ಎಷ್ಟು ? ಯೋಜನೆ ಕಾರ್ಯಗತಗೊಳಿಸಲು ಸರ್ಕಾರವು ತೆಗೆದುಕೊಳ್ಳಲುದ್ದೇಶಿಸಿರುವ ಕ್ರಮವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೭೦-೭೧ರಲ್ಲಿ ಪ್ರಾರಂಭಿಸಿ ೧೯೮೫ರಲ್ಲಿ ಪೂರ್ಣಗೊಳಿಸಲಾಯಿತು. ಈವರೆಗೆ ಖರ್ಚು ಮಾಡಲಾಗಿರುವ ಹಣ ೧೧೯ ಲಕ್ಷ ರೂ. ಗಳು. ಗೇಟನ್ನು ಅಳವಡಿಸದೇ ಇದ್ದುದರಿಂದ ಶೇಕರಣಾ ಸಾಮರ್ಥ್ಯಕ್ಕೆ ಅನುಗುಣವಾಗಿ, ಸಾಧ್ಯವಾದಷ್ಟೂ ಜಮೀನಿಗೆ ನೀರನ್ನು ಒದಗಿಸಲಾಗಿದೆ. ಗೇಟನ್ನು ೧೯೮೮ರ ಏಪ್ರಿಲ್‌ನಲ್ಲಿ ಅಳವಡಿಸಲಾಗಿದೆ.

ಆ) ಮತ್ತ ಇ) } ಅನ್ವೇಷಣೆಯಲ್ಲಿದೆ.

ಮಾಣಿ-ಉಳ್ಳಾಲ ರಸ್ತೆಯ ಬಗ್ಗೆ

೧೪೭೨ (೩೦೯೯) ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ:—

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಟ್ವಾಳ ತಾಲ್ಲೂಕಿನಿಂದ ಮಂಗಳೂರು ತಾಲ್ಲೂಕಿನವರೆಗೆ ಎರಡು ರಾಷ್ಟ್ರೀಯ ಹೆದ್ದಾರಿಗಳನ್ನು ಕೂಡಿಸುವ ಪ್ರಮುಖ ರಸ್ತೆಯಾದ ಮಾಣಿ-ಉಳ್ಳಾಲ ರಸ್ತೆಯನ್ನು ನಿರ್ವಹಿಸಲು ರಾಷ್ಟ್ರೀಯ ಹೆದ್ದಾರಿ ಇಲಾಖೆಗೆ ಒಪ್ಪಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಇಲ್ಲ.

ಗಂಧದಮರ ಕಳ್ಳಸಾಗಾಣಿಕೆ ಬಗ್ಗೆ

೧೪೭೩ (೩೦೮೭) ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಮಾನ್ಯ ವ್ಯವಸಾಯ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಇತ್ತೀಚೆಗೆ ಗಂಧದ ಮರ ಹಾಗೂ ಇವರ ಮರಗಳ ಕಳ್ಳ ಸಾಗಾಣಿಕೆ ಅತೀ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಇದರ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಕೃಷಿ ಹಾಗೂ ಅರಣ್ಯ ಮಂತ್ರಿಗಳು).—

ಅ) ಹೌದು.

ಆ) ೧) ಕರ್ನಾಟಕದ ಅರಣ್ಯ ಕಾಯಿದೆಯನ್ನು ತಿದ್ದುಪಡಿ ಮಾಡಿ ಗಂಧದ ಮರದ ಕಳ್ಳ ಸಾಗಾಣಿಕೆ ಮತ್ತಿತರ ಅರಣ್ಯ ಸಂಪತ್ತನ್ನು ಮತ್ತು ಕಳ್ಳಸಾಗಾಣಿಕೆಯಲ್ಲಿ ನಿರತವಾದ ವಾಹನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕುವಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಕರ್ನಾಟಕ ಅರಣ್ಯ ಕಾಯಿದೆ ೧೯೬೩ರ ೭೧ (ಎ) ಪ್ರಕಾರ ಅಧಿಕಾರ ನೀಡಲಾಗಿದೆ.